# ಪರಿಸರ ದಿನಾಚರಣೆ 2019-20

ಪ್ರತಿಯೊಂದು ದಿನಾಚರಣೆಗಳಂತೆಯೇ ಪರಿಸರ ದಿನಾಚರಣೆಯನ್ನು ವಿಶೇಷ ಸಂಭ್ರಮ ಸಡಗರದಿಂದ ಆಚರಿಸುತ್ತಾ ಬಂದಿದ್ದೇವೆ.

"ಕಾಡನ್ನು ಉಳಿಸಿ, ನಾಡನ್ನು ಬೆಳೆಸಿ" ಒಂದು ಸಸಿಯನ್ನು ಮರವನ್ನಾಗಿ ಬೆಳೆಸಿದರೆ, ಒಂದು ಮಗುವನ್ನು ಬೆಳೆಸಿದಂತೆ ಎಂಬ ಉದ್ದೇಶದಿಂದ ನಮ್ಮ ಡೊನ್ ಬೊಸ್ಕೊ ಸಂಸ್ಥೆಯಲ್ಲಿ ಎಲ್ಲರ ನೇತೃತ್ವದ ಮುಖಾಂತರ ಬಹು ವಿಜೃಂಭಣೆಯಿಂದ ಜೂನ್ ಐದರಂದು ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಅಂದಿನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಲೂರು ಶಾಖೆಯ ಅರಣ್ಯ ಅಧಿಕಾರಿ ಶ್ರೀ. ಮಂಜುನಾಥ ಟಿ. ನಾಯ್ಕರವರು ಉಪಸ್ಥಿತರಿದ್ದರು. ಅಲ್ಲದೆ ನಮ್ಮ ಶಾಲೆಯ ಉಪಪ್ರಾಂಶುಪಾಲರಾದ ಫಾ। ಮರ್ವಿನ್‌ರವರು ಮತ್ತು ಆಡಳಿತ ಮಂಡಳಿಯ ನಿರ್ದೇಶಕರಾದ ಫಾ। ಅಯೋರವರು ನಮ್ಮೊಂದಿಗೆ ನೆರೆದಿದ್ದರು.

ರಕ್ತವಿಲ್ಲದ ದೇಹವು ಹೇಗೆ ಬದುಕಲು ಸಾಧ್ಯವಿಲ್ಲವೋ ಹಾಗೆಯೇ ಆ ದೇವರ ಸ್ತುತಿಯಿಲ್ಲದೆ ಯಾವ ಕೆಲಸದ ಮುನ್ನುಡಿಯನ್ನು ಬರೆಯಲು ಆಗುವುದಿಲ್ಲವೆಂದು ತಿಳಿದು ನಮ್ಮೆಲ್ಲಾ ವಿದ್ಯಾರ್ಥಿನಿಯರು ಪ್ರಾರ್ಥನೆಗೈದರು.

ಈ ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿ ಮಹೋದಯರನ್ನು ಸ್ವಾಗತಿಸುವುದು ನಮ್ಮ ವಾಡಿಕೆಯಾಗಿದೆ. ಹಾಗಾಗಿ ನಮ್ಮ ಶಾಲೆಯ ಶಿಕ್ಷಕಿಯಾಗಿರುವ ಕು। ಟೀನಾ ರವರು ವೇದಿಕೆಯಲ್ಲಿ ಉಪಸ್ಥಿತರಿರುವ ಶ್ರೀ ಮಂಜುನಾಥ ಟಿ. ನಾಯ್ಕ, ಫಾ। ಮರ್ವಿನ್, ಫಾ। ಅಯೋ ಇವರೆಲ್ಲರಿಗೂ ಸ್ವಾಗತಿಸಿ ಹೂಗುಚ್ಛವನ್ನು ನೀಡುವುದರ ಮೂಲಕ ಕಾರ್ಯಕ್ರಮಕ್ಕೆ ಬರಮಾಡಿಕೊಂಡರು.

ನಂತರದಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿನಿಯರಾದ ೭ನೇ ತರಗತಿಯ ಕು।ಅಲ್ವಿಟಾ ರೊಡ್ರಿಗಸ್ ಹಾಗೂ ೮ನೆ ತರಗತಿಯ ಕು। ಶೆರೆಲ್ ರವರು ಪರಿಸರದ ಕುರಿತು ತಮ್ಮ ಮನದಾಳದ ಮಾತುಗಳನ್ನು ನಮ್ಮೊಂದಿಗೆ ಹಂಚಿಕೊಂಡರು.

ಪ್ರಮುಖ ಆಕರ್ಷಣೆಯ ಕೇಂದ್ರ ಬಿಂದುವಾಗಿರುವ ಆಲೂರು ಶಾಖೆಯ ಅರಣ್ಯ ಅಧಿಕಾರಿ ಶ್ರೀ ಮಂಜುನಾಥ ಟಿ. ನಾಯ್ಕರವರು ನಮ್ಮೆಲ್ಲರನ್ನು ಉದ್ದೇಶಿಸಿ, ಪರಿಸರ ಮತ್ತು ಮಾನವ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ' ಹೀಗೆ ಒಂದಕ್ಕೊಂದು ನಿಕಟ ಸಂಬಂಧ ಹೊಂದಿವೆ, ಎಂದ ಮೇಲೆ ಪರಿಸರವನ್ನು ಸಂರಕ್ಷಿಸಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ ಎಂದ ಹೇಳುತ್ತಾ ಹೆಚ್ಚೆಚ್ಚು ಗಿಡಗಳನ್ನು ಬೆಳಸಬೇಕು. ಪರಿಸರದ ಕುರಿತು ಜಾಗೃತಿ ಮೂಡಿಸಬೇಕು ಅಂದರೆ ಮಾತ್ರ "ವಿಶ್ವ ಪರಿಸರ ದಿನಾಚರಣೆಗೆ ಅರ್ಥ ಬರುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ನಮ್ಮೊಂದಿಗೆ ವ್ಯಕ್ತಪಡಿಸಿಕೊಂಡರು, ನಂತರ ವಿದ್ಯಾರ್ಥಿಗಳು ಅಧ್ಯಾಪಕರು ನಮ್ಮ ಶಾಲೆಯ ಗುರುಗಳು ಅತಿಥಿಗಳ ನೇತೃತ್ವದಲ್ಲಿ ಮಾವಿನ ಸಸಿಯನ್ನು ನೆಡುವುದರ ಮುಖಾಂತರ 'ಪರಿಸರದ ದಿನಾಚರಣೆಗೆ ಚಾಲನೆಯನ್ನು ಕೊಟ್ಟೆವು.

ತದನಂತರ ನಮ್ಮ ಶಾಲೆಯ ಉಪಪ್ರಾಂಶುಪಾಲರಾದ ಫಾ। ಮರ್ವಿನ್‌ರವರು ಪರಿಸರದ ಮಹತ್ವವನ್ನು ನಮಗೆ ತಿಳಿಸಿಕೊಟ್ಟರು.

ಬಂದ ಅತಿಥಿಗಳನ್ನು ಸನ್ಮಾನಿಸುವುದು ನಮ್ಮ ಕರ್ತವ್ಯ ಹಾಗಾಗಿ ಶ್ರೀ ಮಂಜುನಾಥ ಟಿ ನಾಯ್ಕರವರನ್ನು ನಮ್ಮ ಶಾಲೆಯ ಆಡಳಿತ ನಿರ್ದೇಶಕರಾಗಿರುವ ಫಾ।ಅಯೋರವರು ಗೌರವ ಸ್ಮರಣಿಕೆ ನೀಡುವುದರ ಮುಖಾಂತರ ಸನ್ಮಾನಿಸಿದರು ಕೊನೆಯದಾಗಿ ಧನ್ಯವಾದ ಸಮರ್ಪಣೆಯನ್ನು ನಮ್ಮ ಶಾಲೆಯ ಶಿಕ್ಷಕಿಯಾಗಿರುವ ವನಿತಾರವರು ನಡೆಸಿಕೊಟ್ಟರು. ನಂತರ ರಾಷ್ಟ್ರಗೀತೆ ಹೇಳುವುದರ ಮೂಲಕ ಕಾರ್ಯಕ್ರಮ ಕೊನೆಗೊಂಡಿತು.